


ಜಪಾನ್‌ನಿಂದ ಬಂದ ಶೀಗೊ ಐರಿ ತಮ್ಮ ಪತ್ನಿ ಹೈರೊ, ಮಕ್ಕಳಾದ ಯುಕಿ, ಮಿಕಿ ಹಾಗೂ ಯೂಸಿ ಜತೆಗೆ. ಚಿತ್ರ: ಬಿ.ಕೆ. ಜನಾರ್ದನ್

# ಆಹಾ ಹಂಪಿ.. ಥಂಡಿ ಥಂಡಿ ಊಟಿ..!

ಎಲ್ಲ ವಿದೇಶೀಯರಿಗೂ ಇಲ್ಲಿಗೆ ಬರುವ ಮುನ್ನ ಭಾರತದ, ಬೆಂಗಳೂರಿನ ಪರಿಸ್ಥಿತಿ, ವಾತಾವರಣ, ಸಂಸ್ಕೃತಿ, ಆಚರಣೆಗಳ ಬಗ್ಗೆ ಅರಿವಿರುತ್ತದೆ. ಏಕೆಂದರೆ ಇಲ್ಲಿಗೆ ಬರುವ ಮೊದಲೇ ಅವರು ಸ್ನೇಹಿತರ ಮುಖಾಂತರವೋ, ಅಂತರ್ಜಾಲವನ್ನು ತಡಕಾಡಿಯೋ ಇಲ್ಲಿಯ ಬಗ್ಗೆ ಸಂಪೂರ್ಣ ಮಾಹಿತಿ ಕಲೆ ಹಾಕಿರುತ್ತಾರೆ.

ಜಪಾನ್‌ನಿಂದ ಬಂದ ಶೀಗೊ ಐರಿ ಹಾಗೂ ಇವರ ಕುಟುಂಬ ಕಳೆದ ಆರು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಶೀಗೊ ಬೆಂಗಳೂರಿಗೆ ಬರುವ ಮುನ್ನ ಚೆನ್ನೈಯಲ್ಲಿದ್ದರು. ಅಲ್ಲಿ ಇಂಡೊ ನಿಸಿನ್ ಫುಡ್ಸ್ ಪ್ರೈ.ಲಿ. ಕಂಪೆನಿಯಲ್ಲಿ ನಿರ್ದೇಶಕರಾಗಿದ್ದರು. ಅದಾಗಿ ಇದೇ ಕಂಪೆನಿ ಕೆಲಸದ ನಿಮಿತ್ತ ಇವರು ಬೆಂಗಳೂರಿಗೆ ಬಂದರು.

ಚೆನ್ನೈಯಲ್ಲಿರುವಾಗಲೇ ಬೆಂಗಳೂರಿಗೆ ಸಾಕಷ್ಟು ಬಾರಿ ಬಂದು ಹೋಗಿದ್ದರಿಂದ ಶೀಗೊ ಅವರಿಗೆ ಬೆಂಗಳೂರು ಹೊಸ ಜಾಗ ಎನಿಸಲೇ ಇಲ್ಲ. 'ಬೆಂಗಳೂರು ಕಾಸ್ಮೊಪಾಲಿಟನ್ ಸಿಟಿ. ಚೆನ್ನೈಯಲ್ಲಿ ವಾಸಕ್ಕಿಂತಲೂ ಇಲ್ಲಿ ಬಹಳ ಚೆನ್ನಾಗಿದೆ. ಚೆನ್ನೈ ತುಂಬ ಉಷ್ಣಾಂಶವಿರುವ ಪ್ರದೇಶ. ಕೆಲಸ ಮಾಡಲೂ ಬೆಂಗಳೂರೇ ಸೂಕ್ತ ಎಂದು ನಮಗನಿಸಿದೆ. ಹಾಗಾಗಿ ಇಲ್ಲೇ ನೆಲೆ ನಿಲ್ಲಲು ನಿರ್ಧರಿಸಿದೆವು' ಎನ್ನುತ್ತಾರೆ ಈ ದಂಪತಿ.

ಶೀಗೊ ಅವರ ಪತ್ನಿ ಹೈರೊ ಮಕ್ಕಳಾದ ಯುಕಿ, ಮಿಕಿ ಹಾಗೂ ಯೂಸಿ ಅವರೊಂದಿಗೆ ಸಂತೃಪ್ತ ಜೀವನ ನಡೆಸುತ್ತಿದ್ದಾರೆ. ಮೂರು ಮಕ್ಕಳೂ ಇಲ್ಲಿನ ಅಂತರಾಷ್ಟ್ರೀಯ ಶಾಲೆಯಲ್ಲಿ ಓದುತ್ತಿದ್ದಾರೆ. ಹೈರೊ ಯೋಗ ಕಲಿತು ಇಲ್ಲಿನ ಆಸಕ್ತರಿಗೆ ಯೋಗಾಸನ ಕಲಿಸುತ್ತಿದ್ದಾರೆ.

'ಇಲ್ಲಿಗೆ ಬಂದ ಮೇಲೆ ಯೋಗ ಕಲಿತೆ. ನಿತ್ಯವೂ ಯೋಗಾಭ್ಯಾಸ ಮಾಡುವುದಲ್ಲದೆ ಆಸಕ್ತ ಮಕ್ಕಳಿಗೆ ಯೋಗ ಹೇಳಿಕೊಡುತ್ತೇನೆ. ಮಕ್ಕಳ ಶಾಲೆಯಲ್ಲೂ ಶಾಲಾ ಅವಧಿ ನಂತರ ಯೋಗ ಕಲಿಸಲು ಆರಂಭಿಸಿದ್ದೇನೆ. ಅನೇಕ ವಿದ್ಯಾರ್ಥಿಗಳು ಯೋಗದ ಕಡೆಗೆ ಒಲವು ತೋರುತ್ತಿದ್ದಾರೆ. ಅಲ್ಲದೆ ಯೋಗಾಸನ ಆರೋಗ್ಯಕ್ಕೆ ಪೂರಕ ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡಲು ಉಪನ್ಯಾಸವನ್ನೂ ಕೊಡುತ್ತೇನೆ. ಅನೇಕ ಮಕ್ಕಳು ಇಷ್ಟಪಟ್ಟು ಯೋಗವನ್ನು ತಪ್ಪದೇ ಮಾಡುತ್ತಿದ್ದಾರೆ' ಎನ್ನುತ್ತಾರೆ ಹೈರೊ.

ಎಲ್ಲ ವಿದೇಶೀಯರಂತೆ ಜಪಾನಿನ ಈ ಕುಟುಂಬದವರಿಗೂ ಬೆಂಗಳೂರಿನ ಟ್ರಾಫಿಕ್ ಜಾಮ್ ಕಿರಿಕಿರಿ ಎನಿಸಿದೆಯಂತೆ. 30 ನಿಮಿಷ ಪ್ರಯಾಣ ಮಾಡ ಬೇಕಾದಲ್ಲಿ ಎರಡು ಗಂಟೆಗಳ ಕಾಲ ಪ್ರಯಾಣ ಮಾಡುವುದು 'ಸಮಯದ ವ್ಯರ್ಥ ನಿರ್ವಹಣೆ' ಎಂದು ಖೇದ ವ್ಯಕ್ತಪಡಿಸುತ್ತಾರೆ ಶೀಗೊ.

'ನಾನು ತಿಳಿದಂತೆ ಜಗತ್ತಿನ ಯಾವುದೇ ದೇಶ, ಭಾಗಗಳಲ್ಲಿ ಇಷ್ಟೊಂದು ಟ್ರಾಫಿಕ್ ಕಿರಿಕಿರಿ ಇಲ್ಲ. ಸುವ್ಯವಸ್ಥಿತವಾದ ಟ್ರಾಫಿಕ್ ನಿರ್ವಹಣೆ, ಉತ್ತಮ ರಸ್ತೆ, ಅಗತ್ಯ ಇರುವ ಕಡೆ ಫ್ಲೈ ಓವರ್‌ಗಳು, ರೈಲು ಸಂಚಾರ ವ್ಯವಸ್ಥೆ ಜತೆಗೆ ಕಾರುಗಳ ಓಡಾಟದಲ್ಲಿ ಮಿತಿ ನಿಭಾಯಿಸಿದರೆ ಇಲ್ಲಿನ ಟ್ರಾಫಿಕ್ ಅವ್ಯವಸ್ಥೆಯನ್ನು ಸರಿಪಡಿಸಬಹುದು' ಎಂಬ ಸಲಹೆ ನೀಡುತ್ತಾರೆ ಅವರು.

'ಇಲ್ಲಿನ ಜನರು ಕ್ರಿಯಾಶೀಲರು. ಜಪಾನಿನ ಜನರು ಬಹಳ ಸೋಮಾರಿಗಳು. ದಿನಕ್ಕೆ 12 ಗಂಟೆಗಳಿಗೂ ಹೆಚ್ಚು ಕಾಲ ಇಲ್ಲಿನವರು ಕೆಲಸ ಮಾಡುತ್ತಾರೆ. ತಮ್ಮ ಕೆಲಸವನ್ನು ಪ್ರೀತಿಸುತ್ತಾರೆ, ಶ್ರಮ ವಹಿಸಿ ದುಡಿಯುತ್ತಾರೆ. ಆದರೆ ಜಪಾನೀಯರು ಇದಕ್ಕೆ ಸಂಪೂರ್ಣ ಹೊರತು. ಹೀಗಾಗಿ ಭಾರತೀಯರ ಕಾರ್ಯ ಶ್ಲಾಘನೀಯ' ಎಂಬ ಮೆಚ್ಚುಗೆಯ ಮಾತುಗಳನ್ನೂ ಸೇರಿಸುತ್ತಾರೆ ಶೀಗೊ.

ಐತಿಹಾಸಿಕ ಸ್ಥಳಗಳ ವೀಕ್ಷಣೆ ಈ ಜಪಾನೀ ಕುಟುಂಬಕ್ಕೆ ಬಹಳ ಇಷ್ಟವಂತೆ. ಈ ದೇಶದಲ್ಲಿ ನೂರಾರು ಚರಿತ್ರಾತ್ಮಕ ತಾಣಗಳಿವೆ. ಪ್ರವಾಸ ಹೋಗುವಾಗ ನಾವು ಐತಿಹಾಸಿಕ ತಾಣಗಳನ್ನೇ ಆಯ್ದುಕೊಳ್ಳುತ್ತೇವೆ. 'ಇತಿಹಾಸದ ಬಗ್ಗೆ ತಿಳಿದು ಕೊಳ್ಳುವುದೂ ನಮಗೆ ಬಹಳ ಇಷ್ಟ' ಎನ್ನುವ ಶೀಗೊ, ಈಗಾಗಲೇ ಆಗ್ರಾ, ಕನ್ಯಾಕುಮಾರಿ, ಊಟಿ, ಮೈಸೂರು, ಹಂಪಿ ಮುಂತಾದ ತಾಣಗಳನ್ನು ನೋಡಿಕೊಂಡು ಬಂದಿದ್ದಾರೆ. ಎಲ್ಲ ಜಾಗಗಳೂ ಬಹಳ ಸುಂದರವಾಗಿವೆ ಹಾಗೂ ನೆನಪಿನಂಗಳದಲ್ಲಿ ಬಹುಕಾಲ ಉಳಿಯುವಂಥವು' ಎಂದು ಹೇಳುತ್ತಾರೆ.

ಹಂಪಿ ನೋಡಿದಾಗ 'ಆಹಾ ಹಂಪಿ..' ಎಂಬ ಉದ್ಗಾರ ಬರುತ್ತದೆ, ಊಟಿಗೆ ಹೋದರೆ ಅಲ್ಲಿ ಚುಮುಚುಮು ಚಳಿ. ಊಟಿ ಸೌಂದರ್ಯಕ್ಕೆ ಸಾಟಿ ಯಾವುದಿದೆ..? ಎರಡೂ ಒಂದಕ್ಕಿಂದ ಒಂದು ಚಂದದ ತಾಣ..!

★ **ಅವನೀಶ್**